ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	683
ವಿಧಾನ ಪರಿಷತ್ ಸದಸ್ಯರ ಹೆಸರು	:	ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವವರು	:	ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು
ಉತ್ತರಿಸಬೇಕಾದ ದಿನಾಂಕ	:	22.02.2022

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಬೀದರ್ ಜಿಲ್ಲೆಯ ಸಣ್ಣ ಕೈಗಾರಿಕಾ ಇಲಾಖೆಯ ಯೋಜನೆಗಳಿಗೆ 2021-22ನೇ 473.57 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ 76.64 ಕೋಟಿ ಖರ್ಚು ಆಗಿರುವುದಾಗಿ ಸದನದಲ್ಲಿ ಭರವಸೆ ನೀಡಿದ್ದು, ಬಾಕಿ ಉಳಿದ 396.93 ಕೋಟಿ ಅನುದಾನ ಬಿಡುಗಡೆ ಮಾಡುವುದು ಯಾವಾಗ;</td><td>2021-22ನೇ ಸಾಲಿನಲ್ಲಿ ಎಂಎಸ್ಎಂಇ ವಲಯಕ್ಕೆ ಒಟ್ಟು 474.84 ಕೋಟಿ ಅನುದಾನ ಹಂಚಿಕೆಯಾಗಿದ್ದು ಇದರಲ್ಲಿ ಆರ್ಥಿಕ ಇಲಾಖೆಯು ಜನವರಿ 2022 ರ ಅಂತ್ಯದವರೆಗೆ ರೂ.272.56 ಕೋಟಿಗಳನ್ನು ಬಿಡುಗಡೆ ಮಾಡಿದ್ದು ಅದರಲ್ಲಿ ರೂ.180.98 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಉಳಿದ ರೂ.202.28 ಕೋಟಿ ಅನುದಾನವನ್ನು ಆರ್ಥಿಕ ಇಲಾಖೆಯು ಬಿಡುಗಡೆ ಮಾಡಬೇಕಾಗಿದ್ದು, ಬಿಡುಗಡೆಯಾದ ನಂತರ ವೆಚ್ಚ ಮಾಡಲಾಗುವುದು.

ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ ಅನುದಾನವನ್ನು ಯೋಜನೆಗಳ ಬೇಡಿಕೆ ಮತ್ತು ರಾಜ್ಯ ಮಟ್ಟದಲ್ಲಿ ಜೇಷ್ಠತೆ ಆಧರಿಸಿ ಬಿಡುಗಡೆ ಮಾಡಲಾಗುತ್ತಿದೆ.</td></tr>
<tr><td>(ಆ)</td><td>ಅನುದಾನ ಬಾಕಿ ಇರಲು ಕಾರಣಗಳೇನು; ಜನರಿಗೆ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಲಾಗಿದೆಯೇ; ನಡೆಸಿದ್ದಲ್ಲಿ ವಿವರ ನೀಡುವುದು;</td><td>ಆರ್ಥಿಕ ಇಲಾಖೆಯು ಅನುದಾನವನ್ನು 4 ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡುತ್ತದೆ. ಅದರಂತೆ ಈಗಾಗಲೇ 2 ಕಂತು ಬಿಡುಗಡೆ ಮಾಡಿದ್ದು ಉಳಿದ 2 ಕಂತುಗಳನ್ನು ಬಿಡುಗಡೆ ಮಾಡಬೇಕಾಗಿರುತ್ತದೆ.

ಜಿಲ್ಲಾ ಕೈಗಾರಿಕಾ ಕೇಂದ್ರ, ಬೀದರ್ ಕಛೇರಿಯು ಉದ್ಯಮಶೀಲರಿಗೆ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಈ ಕೆಳಗಿನಂತೆ ನಡೆಸಿರುತ್ತದೆ.

<table><tr><th>ಕ್ರ. ಸಂ.</th><th>ಸ್ಥಳ</th><th>ಹಾಜರಾದ ದಿನಾಂಕ</th><th>ಉದ್ದಿಮೆದಾರರ ಸಂಖ್ಯೆ</th></tr><tr><td>1</td><td>ಜಿಲ್ಲಾ ತರಬೇತಿ ಕೇಂದ್ರ, ಬೀದರ್</td><td>14/09/2021</td><td>70</td></tr><tr><td>2</td><td>ಸೌಹಾರ್ದ ತರಬೇತಿ ಸಂಸ್ಥೆ, ನೌಬಾದ್, ಬೀದರ್</td><td>25/01/2022</td><td>75</td></tr></table></td></tr>
<tr><td>(ಇ)</td><td>ವಿಶೇಷ ಘಟಕ ಯೋಜನೆ-ನಿವೇಶನ ಸಹಾಯಧನ ಯೋಜನೆಯ ಪ್ರಗತಿ ಹಾಗೂ ಫಲಾನುಭವಿಗಳ ವಿವರ ನೀಡುವುದು; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ದಿನಾಂಕ 1/4/2021 ರಿಂದ 31/12/2021 ರ ವರೆಗೆ ಒಟ್ಟು 245 ಫಲಾನುಭವಿಗಳಿಗೆ ರೂ.14512.79 ಲಕ್ಷಗಳನ್ನು ವಿಶೇಷ ಘಟಕ ಯೋಜನೆಯಡಿ ನಿವೇಶನ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ. ಹಾಗೂ ಕರ್ನಾಟಕ ಕೈಗಾರಿಕಾ ಅಭಿವೃದಿ ಮಂಡಳಿಯವರು ಸಲ್ಲಿಸಿರುವ ಮಾಹಿತಿಯಂತೆ ಮೇಲಿನ</td></tr>
</table>

		ಅವಧಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಸದರಿ ಯೋಜನೆಯಡಿ ಯಾವ ಉದ್ಯಮಿದಾರರು ನಿವೇಶನ ಸಹಾಯಧನವನ್ನು ಪಡೆದಿರುವುದಿಲ್ಲ.
(ಈ)	ಪ್ರೋತ್ಸಾಹ ಮತ್ತು ರಿಯಾಯಿತಿ ಯೋಜನೆಗೆ ಬಂದಿರುವ ಅನುದಾನ ಎಷ್ಟು; ಬಾಕಿ ಇರುವ ಅನುದಾನ ಎಷ್ಟು?	2021-22 ನೇ ಸಾಲಿನಲ್ಲಿ ಪ್ರೋತ್ಸಾಹ ಮತ್ತು ರಿಯಾಯಿತಿ ಯೋಜನೆಗೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ರೂ.24,175.00 ಲಕ್ಷ ಅನುದಾನ ಹಂಚಿಕೆಯಾಗಿದ್ದು ಇಲ್ಲಿಯವರೆಗೆ ರೂ. 11,937.50 ಲಕ್ಷ ಅನುದಾನ ಬಿಡುಗಡೆ ಆಗಿದ್ದು ಇನ್ನು ರೂ. 12,237.50 ಲಕ್ಷ ಬಿಡುಗಡೆ ಆಗಬೇಕಾಗಿರುತ್ತದೆ. ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ 31/3/2021 ರ ಅಂತ್ಯಕ್ಕೆ ಕೈ ಕೈಗಾರಿಕಾ ನೀತಿ ಮತ್ತು ಕೃಷಿ ನೀತಿಗಳಡಿಯಲ್ಲಿ ಒಟ್ಟು 66 ಘಟಕಗಳಿಗೆ ರೂ.16.08 ಕೋಟಿ ಬಾಕಿ ಬಿಡುಗಡೆ ಮಾಡಬೇಕಾಗಿದ್ದು ಇದರಲ್ಲಿ ಜನವರಿ 2022 ರ ಅಂತ್ಯದವರೆಗೆ 23 ಘಟಕಗಳಿಗೆ ರೂ.4.73 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದ 43 ಘಟಕಗಳಿಗೆ ರೂ.11.35 ಕೋಟಿ ಮೊತ್ತವನ್ನು ಅನುದಾನ ಬಂದ ನಂತರ ಜೇಷ್ಠತೆಯ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು. ನೀತಿವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.

ಸಿಐ 33 ಎಸ್‌ಎಸ್‌ಐ 2022

(ಎನ್.ನಾಗರಾಜು (ಎಂ.ಟಿ.ಬಿ))
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಮತ್ತು
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಶ್ರೀ ಅರವಿಂದ ಕುಮಾರ್ ಅರಳಿ, ವಿಧಾನ ಪರಿಷತ್ ಸದಸ್ಯರು ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 683 ಕ್ಕೆ ಅನುಬಂಧ-1

DETAILS OF INCENTIVES AND CONCESSIONS OF BIDAR DISTRICT

POLICY	PERIOD	OUTSTANDING BALANCE		RELEASED		TO BE RELEASED	
		#	Amt	#	Amt	#	Amt
INDUSTRIAL POLICY	2018-19	-	-			-	-
	2019-20	18	2,36,11,811	18	2,36,11,811	-	-
	2020-21	41	10,46,37,121			41	10,46,37,121
	TOTAL	**59**	**12,82,48,932**	**18**	**2,36,11,811**	**41**	**10,46,37,121**
AGRI POLICY	2018-19	2	89,14,300	1	65,00,000	1	24,14,300
	2019-20	4	1,71,87,181	4	1,71,87,181	-	-
	2020-21	1	65,00,000			1	65,00,000
	TOTAL	**7**	**3,26,01,481**	**5**	**2,36,87,181**	**2**	**89,14,300**
TOTAL	2018-19	2	89,14,300	1	65,00,000	1	24,14,300
	2019-20	22	4,07,98,992	22	4,07,98,992	-	-
	2020-21	42	11,11,37,121	-	-	42	11,11,37,121
	TOTAL	**66**	**16,08,50,413**	**23**	**4,72,98,992**	**43**	**11,35,51,421**